# ಸೊಬಗಿನ ಮಧುರ ನೆನಪುಗಳು

**ಕಾಲೇಜಿನ ದಿನಗಳಲ್ಲಿ ಕಳೆದ ನೆನಪುಗಳು ಜೀವನವಿಡೀ ನೆನಪುಗಳ ಸರಮಾಲೆ ಪೋಣಿಸುತ್ತವೆ. 60ರ ದಶಕದಲ್ಲಿ ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಕ್ರೀಡಾತಂಡದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬಹುಮಾನ ಗೆದ್ದದ್ದು ಎಂದಿಗೂ ಮರೆಯಲು ಸಾಧ್ಯವಿಲ್ಲ..**

■ ಡಾ. ಜೆ.ಕೆ. ಶಿವಶಂಕರ್




ಕಾಲೇಜು ದಿನಗಳ ನೆನಪುಗಳನ್ನು ಮೆಲುಕು ಹಾಕುವುದು ಅದೆಷ್ಟು ಖುಷಿಯ ಸಂಗತಿ. ಜೀವನದುದ್ದಕ್ಕೂ ಈ ನೆನಪುಗಳು ಮರುಕಳಿಸಿ ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಅದು ಸುಮಾರು 1960ರ ದಶಕದ ಆರಂಭದ ದಿನಗಳು. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದ ಸುತ್ತಮುತ್ತ ಸಾಗುತ್ತಿದ್ದ ಜೀವನಯಾತ್ರೆಯ ಚಿತ್ರಣವಿದು. ನೆನಪಿನ ಸುರುಳಿಗಳು ಬಿಚ್ಚಿಕೊಳ್ಳುತ್ತಾ ಹೋದಂತೆ, ಆಗಿನ ಸಂಭ್ರಮದ ತುಣುಕುಗಳು ನಾ ಮುಂದು ತಾ ಮುಂದು ಎಂದು ಕಣ್ಣ ಮುಂದೆ ಹಾದು ಹೋಗುತ್ತದೆ. ಬೆಳಗಿನ/ ಸಂಜೆಯ ಸಮಯದಲ್ಲಿ ಬಿಳಿ ಶರ್ಟ್, ನೀಲಿ ನಿಕ್ಕರ್, ಗಾಂಧಿ ಟೋಪಿ ಧರಿಸಿದ ಶಾಲೆಯ ನೂರಾರು ಚಿಣ್ಣರ ಲವಲವಿಕೆಯ ಓಡಾಟದ ಸಂಭ್ರಮ. ಸ್ವಚ್ಛಂದ ಬದುಕು, ಹೋಂ ವರ್ಕ್, ಟೆಸ್ಟ್‌ಗಳಿಲ್ಲದ ದಿನಗಳು. ಬೆನ್ನಿಗೆ ಭಾರದ ಬ್ಯಾಗಿಲ್ಲದ ಸಮಯ... ಇನ್ನೇನು ಬೇಕು? ಸದಾ ಆಟದಲ್ಲಿ ಮಗ್ನರಾಗಿರುತ್ತಿದ್ದರು. ಆದರೂ ಪಾಠ, ಪ್ರವಚನಗಳಲ್ಲಿ ಅಪಾರ ಶ್ರದ್ಧೆ, ಸಾಧನೆಗೆ ಹೆಸರುವಾಸಿ.

ಮಹಿಳಾ ಸಮಾಜದಿಂದ ನ್ಯಾಷನಲ್ ಹೈಸ್ಕೂಲ್ ವೃತ್ತದವರೆಗೆ ದಟ್ಟ ಸಾಲು ವೃಕ್ಷಗಳು ದಿಗಂತದವರೆಗೆ ಚಾಚಿದ್ದು ಮುಳುಗುವ ಸೂರ್ಯನ ಹೊಂಗಿರಣದಲ್ಲಿ ವಿಲಕ್ಷಣ ಪ್ರಭೆಯನ್ನು ಸ್ಫುರಿಸುತ್ತಿತ್ತು. ಹಾಗೆಯೇ, ಆ ಸಮಯದಲ್ಲಿ ವಿವಿಧ ಪಕ್ಷಿಗಳು ಗೂಡು ಸೇರುವ ತವಕದಲ್ಲಿ ಮಾಡುತ್ತಿದ್ದ ಕಲರವ ಕಿವಿಗಡಚಿಕ್ಕುವ ಸದ್ದು ಎಲ್ಲಾ ದಿಕ್ಕಿನಲ್ಲೂ ಪ್ರತಿಧ್ವನಿಸುತ್ತಿತ್ತು. ಇದನ್ನು ಅನುಭವಿಸಿದ ಆಗಿನ ಮಂದಿ ಪುಣ್ಯವಂತರೇ ಸರಿ!

ಸಂಜೆ ಮೈದಾನದ ಎಲ್ಲಾ ಭಾಗದಲ್ಲೂ ವಿವಿಧ ಬಗೆಯ ಆಟಗಳಲ್ಲಿ ನಿರತವಾದ ಅನೇಕ ತಂಡಗಳನ್ನು ನೋಡಬಹುದಿತ್ತು. ಇಲ್ಲಿ ಬೆಂಗಳೂರು ಕ್ರಿಕೆಟರ್ಸ್, ಅಲ್ಲಿ ಸಿಟಿ ಕ್ರಿಕೆಟರ್ಸ್, ಮಧ್ಯದಲ್ಲಿ ಫುಟ್‌ಬಾಲ್, ಸಮಾಜದ ಬಳಿಯಲ್ಲಿ ಹಾಕಿ. ಇದಲ್ಲದೆ ಅಲ್ಲಲ್ಲಿ ರಬ್ಬರ್ ಬಾಲಿನ ಕ್ರಿಕೆಟ್ ತಂಡಗಳು ಮೈಮರೆತು ಆಟದಲ್ಲಿ ನಿರತವಾಗಿರುತ್ತಿದ್ದುವು. ಆಗ ಬೇರೆ ರೀತಿಯ ಆಕರ್ಷಣೆಗಳಿಲ್ಲದೆ ಪ್ರತಿಸಂಜೆ, ನೂರಾರು ಪ್ರೇಕ್ಷಕರು ಅಭ್ಯಾಸದಲ್ಲಿ ತೊಡಗಿದ್ದ ಆಟಗಾರರನ್ನು ನೋಡಿ ಆನಂದ ತುಂದಿಲರಾಗುತ್ತಿದ್ದರು.

ಮೈದಾನದ ಪಶ್ಚಿಮದ ಭಾಗದಲ್ಲಿ, ಮೂರು ಬಾಸ್ಕೆಟ್‌ಬಾಲ್ ಕೋರ್ಟುಗಳಿದ್ದವು. ಮಧ್ಯ ಭಾಗದಲ್ಲಿದ್ದುದು, ನಾನು ಸದಸ್ಯತ್ವ ಹೊಂದಿದ್ದ ನ್ಯಾಷನಲ್ ಕಾಲೇಜು ಸ್ಪೋರ್ಟ್ಸ್ ಕ್ಲಬ್ (NCSC) ಗೆ ಮೀಸಲಾಗಿತ್ತು. ನ್ಯಾಷನಲ್ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಮಾತ್ರ ಇದರಲ್ಲಿ ಸದಸ್ಯತ್ವ ಪಡೆಯಬಹುದಾಗಿತ್ತು. ಆಗ, ಮೈಸೂರು ರಾಜ್ಯದ ಹಿರಿಯರ ಹಾಗೂ ಮಹಿಳೆಯರ ಬಾಸ್ಕೆಟ್ ಬಾಲ್ ಟೀಂಗಳು ಸತತವಾಗಿ ಏಳು ವರ್ಷಗಳ ಕಾಲ ರಾಷ್ಟ್ರೀಯ ಚಾಂಪಿಯನ್ ಆಗಿದ್ದ ಕಾರಣ, ಈ ಆಟಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರಕಿದ್ದು, ಬಹಳಷ್ಟು ಯುವಕ/ ಯುವತಿಯರು ಈ ಆಟದಲ್ಲಿ ಪರಿಣತಿ ಪಡೆಯಲು ಹಾತೊರೆಯುತ್ತಿದ್ದರು. ಇಂಥವರನ್ನು ಉತ್ತೇಜಿಸಲು ನಗರದ ವಿವಿಧ ಬಡಾವಣೆಗಳಲ್ಲಿ ಆಗಾಗ್ಗೆ ಟೂರ್ನಮೆಂಟ್‌ಗಳನ್ನು ಆಯೋಜಿಸುತ್ತಿದ್ದರು. ನಮ್ಮ ಕ್ಲಬ್ ಪ್ರತಿವರ್ಷ ನಡೆಸುತ್ತಿದ್ದ ಟೂರ್ನಮೆಂಟ್ ಒಳ್ಳೆಯ ಹೆಸರು ಗಳಿಸಿತ್ತು. ಪ್ರತಿ ಸಂಜೆ, ನಮ್ಮ ಕೋರ್ಟ್‌ನಲ್ಲಿ ಅಭ್ಯಾಸ ಮಾಡಲು ಬರುತ್ತಿದ್ದ, ಹಿರಿಯ ಆಟಗಾರರಾದ ಎಸ್.ವಿ. ಅಪ್ಪಯ್ಯ, ಡಿ.ಎಸ್. ಭಾರದ್ವಾಜ್, ಆರ್. ಭಾಸ್ಕರ್ ಮುಂತಾದವರ ಆಟವನ್ನು ವೀಕ್ಷಿಸಲು ದೊಡ್ಡ ದಂಡೇ ನೆರೆಯುತ್ತಿತ್ತು. ಅಂದಿನ ಆ ನೋಟ ಈಗಲೂ ಸವಿನೆನಪಾಗಿ ಉಳಿದಿದೆ.

## ಟೂರ್ನಮೆಂಟ್ ಗೆದ್ದ ಸಂಭ್ರಮ

1962ರಲ್ಲಿ ನಮ್ಮ NCSC ಟೀಂ, ಮಧುರೆಯಲ್ಲಿ ನಡೆದ ಟೂರ್ನಮೆಂಟ್‌ನಲ್ಲಿ ಭಾಗವಹಿಸಿ, ಅಂತಿಮ ಪಂದ್ಯದಲ್ಲಿ, ದಕ್ಷಿಣ ವಲಯ ರೈಲ್ವೆ ಟೀಂನ್ನು ಸೋಲಿಸಿ ವಿಜಯಿಗಳಾದೆವು. ನಮ್ಮ ಗೆಲುವಿಗೆ, ಖ್ಯಾತ ಆಟಗಾರರಾದ ಎಸ್. ನರಸಿಂಹರಾಜನ್, ಡಿ.ಎಸ್. ಭಾರದ್ವಾಜ್ ಹಾಗೂ ಆರ್. ಭಾಸ್ಕರನ್ ಮುಖ್ಯ ಕಾರಣರಾಗಿದ್ದರು. ಈ ಫೋಟೊದಲ್ಲಿ, ನಮ್ಮ ಟೀಂ ಪಡೆದ ಬಹುಮಾನಗಳೊಂದಿಗೆ ಭಾಗವಹಿಸಿದ ಟೀಂ ಸದಸ್ಯರಿದ್ದಾರೆ. ಈಗ 57 ವರ್ಷಗಳ ನಂತರ, ಈ ಫೋಟೊ ನೋಡಿದಾಗ ಆಗಿನ ರಸನಿಮಿಷಗಳು, ಪಂದ್ಯ ಗೆಲ್ಲಲು ಪಟ್ಟ ಪರಿಶ್ರಮ, ನೆನಪಿಗೆ ಬಂದು ಪುಳಕಿತನಾಗುತ್ತೇನೆ. ಇದರ ಸವಿ ನೆನಪು ಸದಾ ನಮ್ಮೊಡನೆ ಇರುತ್ತದೆ. ■